31		ಮಾರುತಿ ಗ್ರಾಮೀಣ ವಿದ್ಯಾ ಕೇಂದ್ರ	27
32		ಯೂನಿಟಿ ವಿದ್ಯಾ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ	7
33		ಆದರ್ಶ ಮಹಿಳಾ ಒಕ್ಕೂಟ	1
34	ಮೈಸೂರು	ಇಸ್ಕಾನ್	1
35	ಬಾಗಲಕೋಟೆ	ಜಮಖಂಡಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ	3
36		ಪೂರ್ಣಿಮಾ ಗ್ರಾಮೀಣಾಭಿವೃದ್ಧಿ ಸಂಸ್ಥೆ	7
37	ಬಳ್ಳಾರಿ	ಇಸ್ಕಾನ್	17
	ಒಟ್ಟು		**867**

ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ)130(327)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಬೆಳ್ತಂಗಡಿ ತಾಲ್ಲೂಕು ಪ್ರದೇಶದ ಎಷ್ಟು ಪ್ರೌಢ ಶಾಲೆಗಳಿಗೆ ಇನ್ನೂ ಖಾಯಂ ಮುಖ್ಯೋಪಾಧ್ಯಾಯರನ್ನು ನೇಮಕಗೊಳಿಸಲಾಗಿಲ್ಲ.

ಆ) ಗ್ರಾಮೀಣ ಪ್ರದೇಶಗಳಲ್ಲಿರುವ ಪ್ರೌಢ ಶಾಲೆಗಳಲ್ಲಿ ಬೋಧಕ ವರ್ಗ ಮತ್ತು ಮುಖ್ಯೋಪಾಧ್ಯಾಯರುಗಳ ನೇಮಕಾತಿಯು ಅತ್ಯಾವಶ್ಯಕವಾಗಿದ್ದು, ಆ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಬಸವರಾಜ ಹೊರಟ್ಟಿ

ಅ) ಬೆಳ್ತಂಗಡಿ ತಾಲ್ಲೂಕಿನ 17 ಪ್ರೌಢ ಶಾಲೆಗಳಿಗೆ ಖಾಯಂ ಮುಖ್ಯೋಪಾಧ್ಯಾಯರನ್ನು ನೇಮಕಗೊಳಿಸಲಾಗಿಲ್ಲ.

ಆ) 2006-07 ನೇ ಸಾಲಿನಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇದ್ದ 5984 ಸಹ ಶಿಕ್ಷಕರ ಗ್ರೇಡ್-2 ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್-1 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 181 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ

ಗ್ರಾಮೀಣ ಪ್ರದೇಶಗಳಲ್ಲಿನ ಪ್ರೌಢ ಶಾಲೆಗಳಿಗೆ ನೇಮಕಾತಿ ಆದೇಶವನ್ನು ನೀಡಲಾಗಿದೆ.

ನೇರ ನೇಮಕಾತಿಗಾಗಿ ಮೀಸಲಿರುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಮೊದಲನೆ ಹಂತವಾಗಿ 558 ಹುದ್ದೆಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

ಇನ್ನೂ ನೇರ ನೇಮಕಾತಿಗಾಗಿ ಬಾಕಿ ಇರುವ ಹುದ್ದೆಗಳಲ್ಲಿ 2ನೇ ಹಂತದಲ್ಲಿ 530 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಮೇಲಿನಂತೆ ಮೊದಲನೇ ಮತ್ತು 2ನೇ ಹಂತದಲ್ಲಿ ಒಟ್ಟು 1088 ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಭರ್ತಿ ಮಾಡಲಾಗುತ್ತಿದ್ದು, ಆದ್ಯತೆಯ ಮೇಲೆ ಗ್ರಾಮೀಣ ಪ್ರದೇಶಕ್ಕೆ ನೇಮಕ ಮಾಡಲಾಗುವುದು.

ಶ್ರೀ ರಘುಪತಿ ಭಟ್. ಕೆ.(ಉಡುಪಿ)131(333)

ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಉಡುಪಿ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ಬಿಡುಗಡೆಯಾದ ಅನುದಾನ ಎಷ್ಟು; ಇದರಲ್ಲಿ ಪೂರ್ಣಗೊಂಡ ಕಾಮಗಾರಿ ಎಷ್ಟು; ಬಾಕಿ ಎಷ್ಟು;

ಆ) ಟಾಸ್ಕ್‌ಫೋರ್ಸ್ ಯೋಜನೆಯಡಿ ಈ ಸಾಲಿಗೆ ರೂಪಿಸಲಾದ ಕಾಮಗಾರಿ ಕ್ರಿಯಾ ಯೋಜನೆ ಮೊತ್ತ ಎಷ್ಟು; ಅದರಲ್ಲಿ ಪೂರ್ಣಗೊಂಡ ಮತ್ತು ಬಾಕಿಯಿರುವ ಕಾಮಗಾರಿಗಳ ಸಂಪೂರ್ಣ ವಿವರ ನೀಡುವುದು?